# ನನ್ನ ಮಾವ.. ನನ್ನಮ್ಮನ ಪ್ರೀತಿಯ ತಮ್ಮ..



ನಮ್ಮದೊಂದು ಹಳ್ಳಿ, ಸರಿಯಾಗಿ ಬಸ್, ವಿದ್ಯುತ್ ಹಾಗೂ ಇತರ ಸೌಲಭ್ಯಗಳೂ ಕೂಡ ಇರದ ಒಂದು ಸಾಮಾನ್ಯ ಹಳ್ಳಿ. ಆ ಹಳ್ಳಿಯಲ್ಲೊಂದು ಸಾಮಾನ್ಯ ಬಡ ಕುಟುಂಬ. ನನ್ನ ತಾತ ಆ ಕಾಲದಲ್ಲಿಯೇ ಶಿಕ್ಷಕರಾಗಿದ್ದವರು. ಆದ್ದರಿಂದಲೇ ನಮ್ಮನ್ನು ಮೇಷ್ಟ್ರ ಮನೆಯವರು ಅಂತಲೇ ಕರೆಯುತ್ತಿದ್ದರು. ಇಂದಿಗೂ ಕೂಡ ನಮ್ಮ ಅಪ್ಪ ಚಿಕ್ಕಪ್ಪನ್ನು ಸಹ ಊರಿನಲ್ಲಿ ಮೇಷ್ಟ್ರೇ ಅಂತಲೇ ಜನ ಮಾತನಾಡಿಸುತ್ತಾರೆ. ಇದೇ ನಾವು ನಮ್ಮ ತಾತನಿಂದ ಪಡೆದ ಐಡೆಂಟಿಟಿ.

ಮೂಲ ವಿಷಯಕ್ಕೆ ಬಂದರೇ, ನನ್ನ ಜನ್ಮದಿನದಂದು ನಮ್ಮ ಊರಿನಲ್ಲಿ ಒಬ್ಬರ ಸಾವಾಗಿತ್ತು. ಅದು ನಮ್ಮ ಮನೆಯ ಮುಂದೆಯೇ ಶವ-ಸಂಸ್ಕಾರ ಇತರೆ ಕಾರ್ಯಗಳು ನಡೆಯುತ್ತಿದ್ದುದರಿಂದ ನನ್ನ ಮೊದಲ ವರ್ಷದ ಹುಟ್ಟುಹಬ್ಬವನ್ನು ನಿಲ್ಲಿಸಿದ್ದರು. ಇದೆಲ್ಲವನ್ನು ಹೇಳುತ್ತಾ ಸುಮಾರು ಹತ್ತು ವರ್ಷಗಳೇ ಕಳೆದವು. ನನಗೆ ಈ ಹುಟ್ಟುಹಬ್ಬ ಆಚರಣೆಯ ಪರಿಕಲ್ಪನೆಯೇ ಇಲ್ಲದಾಗಿತ್ತು. ಆಗಿನ ಕಾಲದಲ್ಲಿ ಈಗಿನ ತರಹ ಎಲ್ಲರೂ ತಮ್ಮ ಮಕ್ಕಳ ಹುಟ್ಟುಹಬ್ಬವನ್ನು ಆಚರಿಸುವುದಿರಲಿ ಎಷ್ಟೋ ಜನಕ್ಕೆ ಹುಟ್ಟಿದ ದಿನವೇ ತಿಳಿದಿರಲಿಲ್ಲ ಅಂತಹ ಊರು ಹಾಗೂ ಅಂತಹ ಕಾಲವದು.

ನಮ್ಮ ತಾತ ಬಹಳ ಸರಳಜೀವಿ ಹಾಗೆಯೇ ಒಂತರಹ ಸ್ವಾಭಿಮಾನಿ ಕೂಡ. ಅವರಿಗೆ ಯಾವುದೇ ಆಚರಣೆಗಳಲ್ಲಿ ಆಸಕ್ತಿಯಿರಲಿಲ್ಲ. ಕಾಲ ಕಳೆದಂತೆ ಅವರು ನಮ್ಮನ್ನಗಲಿದರು. ಈಗಿದ್ದಾಗ ನನಗೆ ಸುಮಾರು ಅಂದಾಜು ಹತ್ತನ್ನೊಂದು ವರ್ಷವಿರಬಹುದು, ಆ ದಿನ ನನ್ನ ಹುಟ್ಟಿದ ದಿನ ಪ್ರತೀ ವರ್ಷದಂತೆ ಆ ದಿನಕೂಡ ಬೆಳಗ್ಗೆ ಎದ್ದು ಸ್ನಾನ ಮಾಡಿ ದೇವರಿಗೆ ನಮಸ್ಕರಿಸಿ, ಅಮ್ಮ ಮಾಡಿದ ಉಪ್ಪಿಟ್ಟು ಕೇಸರಿಬಾತ್ ತಿಂದು ಆಟ ಆಡಲು ತೆರಳಿದ್ದೆ. ಸಂಜೆ ಐದು ಗಂಟೆ ಸುಮಾರಿಗೆ ಬಂದವರೇ

ನನ್ನ ಬಾಲ್ಯದ ಹೀರೋ ನನ್ನ ಮಾವ. ನನಗೆ ಇಬ್ಬರು ಮಾವಂದಿರು, ಒಬ್ಬರು ಬಾಲ್ಯದ ಹೀರೋ ಆದರೆ ಇನ್ನೊಬ್ಬರು ಜೀವನ ರೂಪಿಸಿದ ಗುರುಗಳು.

ಆ ದಿನ ಅವರು ಬರೀ ಹೊಸ ಬಟ್ಟೆ, ಕೇಕ್ ಮಾತ್ರ ತಂದಿರಲಿಲ್ಲ, ಬದಲಿಗೆ ನಾನು ಕಳೆದುಕೊಂಡಿದ್ದ ಹುಟ್ಟುಹಬ್ಬದ ಆಚರಣೆಯ ಪರಿಕಲ್ಪನೆಯನ್ನೇ ಹೊತ್ತು ತಂದಿದ್ದರು. ನನ್ನ ಸಂತೋಷಕ್ಕೆ ಸರಿಸಾಟಿಯೇ ಇಲ್ಲದಂತ್ತಾಗಿತ್ತು. ನನಗೆಲ್ಲವೂ ಹೊಸದಾಗಿತ್ತು. ನನ್ನ ಸ್ನೇಹಿತರೊಂದಿಗೆ, ಅಕ್ಕಪಕ್ಕದ ಮನೆಯವರೊಂದಿಗೆ ಹುಟ್ಟುಹಬ್ಬದ ಆಚರಣೆ ನನಗೆ ಬಹಳ ಖುಷಿ ನೀಡಿತ್ತು. ಇದೆಲ್ಲವನ್ನು ನೋಡಿ ಕೆಲವರು ಅಷ್ಟು ವರ್ಷದಿಂದೆಲ್ಲ ಇಲ್ಲದಿರುವುದು ಈಗೇನು ಎಂದು ಗೇಲಿ ಮಾಡಿದ್ದೂ ಕೂಡ ಉಂಟು.

ಅಂದಿನಿಂದ ನನ್ನ ಪಾಲಿಗೆ ಒಂತರ ನನ್ನ ಮಾವನೇ ನನಗೆ ಹೀರೋ. ಯಾವುದೇ ಸಿನಿಮಾ ಪೋಸ್ಟರ್ ನೋಡಿದಾಗ, ಸಿನಿಮಾ ನೋಡಿದಾಗ ಅಲ್ಲಿರುವ ನಾಯಕನಟರೊಂದಿಗೆ ನನ್ನ ಮಾವನ ಹೋಲಿಕೆ ಮಾಡಿಕೊಳ್ಳುತ್ತಿದ್ದೆ. ಅಂದಿನಿಂದ ನಾನು ದೊಡ್ಡವನಾಗುವವರೆಗೂ ಪ್ರತೀ ವರ್ಷ ನನ್ನ ಮಾವನ ಬರುವಿಕೆಗೆ ಕಾಯುವುದರಲ್ಲಿಯೇ ಒಂತರಹ ಖುಷಿ. ಈ ವರ್ಷ ಯಾವ ತರಹ ಬಟ್ಟೆ ತರುತ್ತಾರೆ, ಯಾವ ವ ತರಹದ ಕೇಕ್ ತರುತ್ತಾರೆ ಎಂಬ ಕುತೂಹಲ. ಪ್ರತೀ ವರ್ಷ ತಪ್ಪದೇ ನನ್ನ ಮಾವ ಬರುತ್ತಿದ್ದರು ನನ್ನ ಖುಷಿಯನ್ನು ದುಪ್ಪಟ್ಟುಗೊಳಿಸುತ್ತಿದ್ದರು. ಈಗ ಕುಳಿತಲ್ಲಿಯೇ ಬೇಕಾದ ಎಷ್ಟೋ ತರಹದ ಪೇಸ್ಟ್ರಿ ತರಿಸಿ ತಿನ್ನುವ ಸಾಮರ್ಥ್ಯವಿದ್ದರೂ ಆ ದಿನಗಳ ಖುಷಿಗೆ, ಆ ಕಾಯುವ ಕುತೂಹಲಕ್ಕೆ, ಆ ಸಂತೃಪ್ತಿಗೆ ಸರಿಸಮವಾಗುವುದಿಲ್ಲ. ಹಾಗಂತ ನನ್ನ ಮಾವ ಅಗರ್ಭ ಶ್ರೀಮಂತರೇನಲ್ಲ.

ನನ್ನ ಮಾವನ ಬಗ್ಗೆ ಹೇಳಬೇಕೆಂದರೆ, ಒಬ್ಬ ಸಾಮಾನ್ಯ ದಿನಪತ್ರಿಕೆಯ ವಿತರಕರಾಗಿ ವೃತ್ತಿ ಪ್ರಾರಂಭಿಸಿ, ನಂತರ ದಿನಪತ್ರಿಕೆಯ ವರದಿಗಾರರಾಗಿ, ತಾಲ್ಲೂಕು ವರದಿಗಾರರಾಗಿ, ಸುತ್ತಮುತ್ತಲಿನ ಊರುಗಳಲ್ಲಿಯೇ ಉತ್ತಮ ಛಾಯಾಗ್ರಾಹಕರಾಗಿ, ಅಡ್ವೋಕೇಟ್ ಆಗಿ ಪ್ರಸಿದ್ಧಿಯಾದವರು. ಹಾಗಂತ ಅವರ ಶೈಕ್ಷಣಿಕತೆಗೇನು ಕಡಿಮೆಯಿಲ್ಲ.

## “Mr. Shiva swamy M”

BA, LLB, MA, B.Ed, M.Ed, M.lisc

UGC-NET and K-SET qualified

ಸದ್ಯ ಚಾಮರಾಜನಗರ ಜಿಲ್ಲಾ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಜಿಲ್ಲಾ ಸಂಯೋಜಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಇಂದಿಗೂ ನನ್ನ ಅಮ್ಮನಿಗೆ ನನಗಿಂತಲೂ ಒಂದು ಕೈ ನನ್ನ ಮಾವನ ಮೇಲೆಯೇ ಪ್ರೀತಿ ಎಂದರೇ ತಪ್ಪಾಗಲಾರದು. ನನಗೂ ಇದು ತಿಳಿದಿದ್ದೂ ಇತ್ತೀಚಿಗೆ ಒಂದು ಸಣ್ಣ ಸನ್ನಿವೇಷದಿಂದ. ಪ್ರತಿದಿನ ತಪ್ಪದೇ ನನ್ನಮ್ಮನಿಗೆ ಕರೆಮಾಡಿ ವಿಚಾರಿಸದೇ ಇದ್ದಿದ್ದೂ ನಾನಂತು ನೋಡಿಲ್ಲ. ಯಾವುದೇ ವಿಷಯವಾಗಲಿ ನನ್ನಮ್ಮ ಮೊದಲು ತಿಳಿಸುವುದು ನನ್ನ ಮಾವನಿಗೆ, ಅವರೊಂದಿಗೆ ಚರ್ಚಿಸಿ

ನಂತರವೇ ಯಾವುದೇ ತೀರ್ಮಾನ ಕೈಗೊಳ್ಳುತ್ತಾರೆ. ಈ ಬಂಧ ಸದಾಕಾಲ ಹೀಗೆ ಇರಲಿ ಎಂದು ನಾನು ದಿನಾ ಪ್ರಾರ್ಥಿಸುತ್ತೇನೆ.

ಇಂದು ಸಾವಿರಾರು ಜನರ ಮುಂದೆ ಯಾವುದೇ ಅಳುಕು ಭಯವಿಲ್ಲದೇ ಮಾತನಾಡುವ ನನಗೆ ನನ್ನ ಮಾವಂದಿರ ಎದುರು ನಿಂತು ಅವರ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡುವ ಧೈರ್ಯವಿಲ್ಲ. ಇದು ಭಯವೋ ಅಥವಾ ವಿನಯವೋ ಅಥವಾ ಗೌರವವೋ ತಿಳಿಯುತ್ತಿರಲಿಲ್ಲ, ಆದೇ ಈಗ ಅರಿವಾಗಿಗೆ ಆ ಧೈರ್ಯ ಕೊಟ್ಟಿದ್ದು ಅವರೇ ಎಂದು.

ಈಗಲೂ ಅವರ ಹುಟ್ಟುಹಬ್ಬವನ್ನು ಬಹಳ ಅದ್ಧೂರಿಯಾಗಿ ಆಚರಿಸಬೇಕು, ಅವರನ್ನು ಒಂದು ದೊಡ್ಡ ಹೋಟೆಲಿಗೆ ಒಂದು ಸಲವಾದರೂ ಊಟಕ್ಕೆ ಕರೆದುಕೊಂಡು ಹೋಗಬೇಕು ಎಂಬುದು ಇನ್ನೂ ಮನಸಲ್ಲಿ ಹಾಗೆ ಉಳಿದಿದೆ. ಅಮ್ಮನ ಅನಾರೋಗ್ಯದಲ್ಲಿ ಹಾಗೂ ಅಪ್ಪನಿಗೆ ಅಪಘಾತವಾದಾಗ ನನ್ನೊಂದಿಗೆ ನಿಂತದ್ದು ನನ್ನ ಮಾವಂದಿರು. ನನ್ನನ್ನು ಪ್ರಶ್ನೆ ಮಾಡುವ ಅಧಿಕಾರ ಇರುವುದು ಅಮ್ಮ ಅಪ್ಪನ ಬಿಟ್ಟರೆ ಇವರಿಬ್ಬರಿಗೆ ಮಾತ್ರ.

ಈಗಲೂ ಏನೇ ಸಮಸ್ಯೆ ಬಂದರೂ ನನ್ನ ಹಿಂದೆ ನನ್ನ ಮಾವಂದಿರು ಇದ್ದಾರೆ ಎನ್ನುವ ಧೈರ್ಯ ನನಗಿದೆ. ಏನೇ ಹೊಸಪ್ರಯತ್ನಕ್ಕೆ ಕೈಹಾಕುವಾಗಲೂ ಕೂಡ ನನ್ನ ಮಾವಂದಿರು ಇದ್ದಾರೆ ಎನ್ನುವ ಧೃಡನಂಬಿಕೆ ನನಗಿದೆ. ಹಿಂದೆಯೂ, ಇಂದಿಗೂ ಹಾಗೂ ಎಂದೆಂದಿಗೂ ಇವರೇ ನನ್ನ ಪಾಲಿನ ಮಾರ್ಗದರ್ಶಕರು, ನನ್ನ ಜೀವನದ ಗುರುಗಳು.

ಕೊನೆಯದಾಗಿ ಹೇಳುವುದಾದರೆ ನಾನು ಇರುವವರೆಗೂ ನಿಮ್ಮ ಋಣ ನನ್ನ ಮೇಲಿರುತ್ತದೆ. ಧನ್ಯವಾದಗಳು ಮಾವ ನನ್ನ ಜೀವನದ ಅತೀ ಮುಖ್ಯ ವ್ಯಕ್ತಿಯಾಗಿರುವುದಕ್ಕೆ ಹಾಗೂ ನನ್ನಮ್ಮನ ಪ್ರೀತಿಯ ತಮ್ಮನಾಗಿರುವುದಕ್ಕೆ....

ನಿಮ್ಮ ಸಂಜು

ಇಂದ,

ಸಂಜಯ್ ಮಹದೇವಯ್ಯ,

ತಾಂತ್ರಿಕ ಸಹಾಯಕರು,

ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು